ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 20/04/2019

# ಮೀಸಲು ಸಂಕಟಕ್ಕೆ ವಾರದಲ್ಲಿ ಪರಿಹಾರ

## ಸುಪ್ರೀಂ ತೀರ್ಪಿಗಾಗಿ ಕಾದಿವೆ 5 ರಾಜ್ಯಗಳು

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮೀಸಲು ಬಡ್ತಿ ಸಂಕಟಕ್ಕೆ ಶೀಘ್ರವೇ ತೆರೆ ಬೀಳುವ ಸಾಧ್ಯತೆ ಇದ್ದು, ಮುಂದಿನವಾರ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸುವ ಸಾಧ್ಯತೆ ಇದೆ.

ಮೀಸಲು ಬಡ್ತಿ ಶೇ.18 ಮೀರಬಾರದೆಂಬ ನಿಯಮವಿದ್ದರೂ ಅದನ್ನು ಮೀರಲಾಗಿದೆ. ಮೀಸಲು ಬಡ್ತಿ ನೀಡುವಾಗ ನಿಯಮ ಪಾಲಿಸಿಲ್ಲ ಎಂಬುದು ಅಲ್ಪಸಂಖ್ಯಾತ, ಹಿಂದುಳಿದ ಮತ್ತು ಸಾಮಾನ್ಯ ವರ್ಗದ ಸರ್ಕಾರಿ ನೌಕರರ ವಾದವಾಗಿದ್ದು, 27 ವರ್ಷಗಳಿಂದ ಪ್ರಕರಣ ನ್ಯಾಯಾಲಯದಲ್ಲಿದೆ.

**ಬಡ್ತಿಗೆ ಸುಪ್ರೀಂ ಕತ್ತರಿ:** 2017ರ ಫೆಬ್ರವರಿಯಲ್ಲಿ ಸುಪ್ರೀಂಕೋರ್ಟ್ 1978ರಿಂದೀಚೆಗೆ ನೀಡಲಾದ ಮೀಸಲು ಬಡ್ತಿಯನ್ನು ರದ್ದುಪಡಿಸಿ, ಹೊಸದಾಗಿ ಜ್ಯೇಷ್ಠತಾ ಪಟ್ಟಿ ಮಾಡಿ ಬಡ್ತಿ ನೀಡುವಂತೆ ಸೂಚನೆ ನೀಡಿತ್ತು. ಈ ತೀರ್ಮಾನದಿಂದ ಸಾವಿರಾರು ಎಸ್ಸಿಎಸ್ಟಿ ನೌಕರರ ಬಡ್ತಿಗೆ ಕತ್ತರಿ ಬಿದ್ದಿತ್ತು. ಜತೆಗೆ ಅಷ್ಟೇ ಸಂಖ್ಯೆಯ ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ ವರ್ಗದವರಿಗೆ ಜ್ಯೇಷ್ಠತೆ ಅನುಸಾರ ಬಡ್ತಿ ಸಿಕ್ಕಿತ್ತು. ಈ ಸಂದರ್ಭದಲ್ಲಿ ಎಸ್ಸಿಎಸ್ಟಿ ನೌಕರರ ಹಿತರಕ್ಷಣೆಗೆ ಮುಂದಾಗಿದ್ದ ಆಗಿನ ಸಿದ್ದರಾಮಯ್ಯ ಸರ್ಕಾರ, ಸುಪ್ರೀಂಕೋರ್ಟ್ ಆದೇಶ ಊರ್ಜಿತಗೊಳ್ಳದಂತೆ ಹೊಸ ಕಾನೂನು ತಂದಿತು. ರಾಷ್ಟ್ರಪತಿ ಕೂಡ ವಿಧೇಯಕಕ್ಕೆ ಸಹಿ ಹಾಕಿದರು. ಆದರೆ ಅದನ್ನು ಜಾರಿ ಮಾಡಲು ಎಚ್.ಡಿ.ಕುಮಾರಸ್ವಾಮಿ ಸರ್ಕಾರ ಹಿಂದೇಟು ಹೊಡೆಯಿತು. ಈ ಬಗ್ಗೆ ಹೋರಾಟಗಳೇ ನಡೆದು, ಸರ್ಕಾರದ ಮೇಲೆ ಎಸ್ಸಿಎಸ್ಟಿ ನೌಕರರ ಒತ್ತಡ ಹೇರಲಾರಂಭಿಸಿದರು. ಹೊಸ ಕಾನೂನು ಜಾರಿ ಮಾಡುತ್ತಿದ್ದಂತೆ ಅಹಿಂಸಾ ಸಂಘಟನೆಯು ಸುಪ್ರೀಂಕೋರ್ಟ್ ಮೂಲಕ ಕಾನೂನು ಜಾರಿಗೆ ತಡೆ ತಂದಿತು.

> **ಕರ್ನಾಟಕದ ಮೀಸಲು ಬಡ್ತಿ ಪ್ರಕರಣದ ತೀರ್ಪು ದೇಶಕ್ಕೆ ಮಹತ್ವದ್ದು. ನಾವಂತೂ ಆಶಾವಾದಿಗಳಾಗಿದ್ದೇವೆ. 27 ವರ್ಷಗಳಿಂದ ಹೋರಾಟ ನಡೆಸಿದ್ದೇವೆ, ನಮ್ಮ ಪರವಾಗಿಯೇ ತೀರ್ಪು ಬರುವ ವಿಶ್ವಾಸವಿದೆ.**
>
> **। ಎಂ. ನಾಗರಾಜ್**
> **ಅಹಿಂಸಾ ಸಂಘಟನೆ**

ಈಗ ವಿಚಾರಣೆ ನಡೆಸಿರುವ ಸುಪ್ರೀಂಕೋರ್ಟ್, ಮಾರ್ಚ್ ಕೊನೆಯೊಳಗೆ ತನ್ನ ತೀರ್ಪು ಪ್ರಕಟಿಸುವುದಾಗಿ ಹೇಳಿತ್ತು. ಸರಣಿ ರಜೆ ಕಾರಣ ಸೋಮವಾರದ ಬಳಿಕ ಯಾವುದೇ ದಿನ ತೀರ್ಪು ಪ್ರಕಟವಾಗುವ ಸಾಧ್ಯತೆ ಇದೆ.

**ಆರು ರಾಜ್ಯಗಳ ಗಮನ:** ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ, ಪಂಜಾಬ್, ತ್ರಿಪುರಾ ರಾಜ್ಯಗಳು ಮತ್ತು ಕೇಂದ್ರ ಸರ್ಕಾರ ಸಹ ಕರ್ನಾಟಕದ ಪ್ರಕರಣದ ತೀರ್ಪನ್ನು ಎದುರು ನೋಡುತ್ತಿವೆ. ನ್ಯಾಯಾಲಯ ರಾಜ್ಯ ಸರ್ಕಾರದ ಕಾನೂನು ಜಾರಿಗೆ ಅವಕಾಶ ಕೊಡದೆ ಈ ಹಿಂದೆ ತಾನು ನೀಡಿದ್ದ ತೀರ್ಪಿಗೆ ಸೂಚನೆ ನೀಡಿದರೆ ಆ ಐದು ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಒಂದು ಸ್ಪಷ್ಟತೆ ಸಿಗಲಿದೆ. ಒಂದು ವೇಳೆ ರಾಜ್ಯ ಸರ್ಕಾರ ಜಾರಿ ಮಾಡಿದ ಮೀಸಲು ಬಡ್ತಿ ರಕ್ಷಿಸುವ ಹೊಸ ಕಾನೂನನ್ನೇ ಎತ್ತಿ ಹಿಡಿದರೆ ಆ ರಾಜ್ಯಗಳಲ್ಲಿ ಇದೇ ಕಾನೂನು ತರಲು ಮುಂದಾಗುತ್ತವೆ.